ಪಂಥವನ್ನೇ ಇದಕ್ಕೆ ಉತ್ತಮ ಉದಾಹರಣೆಯಾಗಿ ಕೊಡಬಹುದು. ನಿಜಾರ್ಥದಲ್ಲಿ ಅಫಿಷಿಯಲ್ ಇಸ್ಲಾಂ ಹೊರ ಆವರಣವನ್ನು ಕೆಲವೊಮ್ಮೆ ಭಂಜಿಸಿಯೂ, ಸಾಮಾನ್ಯ ಮನುಷ್ಯನ ಘನತೆಯನ್ನು ಎತ್ತಿ ಹಿಡಿಯುವ ಅನುಭಾವಿಕ ಪ್ರಜ್ಞೆಯದು. ಸಮಕಾಲೀನ ಕಟು ವಾಸ್ತವಗಳೊಂದಿಗೆ ಅನುರಣಿಸುವ, ನ್ಯಾಯ, ಸಮಾನತೆ ಮತ್ತು ಸಹಾನುಭೂತಿಯ ತತ್ವಗಳನ್ನು ಬೆಂಬಲಿಸುವ ದಾರಿಯಲ್ಲಿ ಇಸ್ಲಾಂ ಅನ್ನು ಮರು ವ್ಯಾಖ್ಯಾನಿಸುತ್ತದೆ.

ಅಂತಿಮವಾಗಿ ಹೇಳುವುದಾದರೆ ನನ್ನದು ನಿರಾಕರಣೆಯ ದೃಷ್ಟಿಕೋನವಲ್ಲ; ನಿವಾರಣೆಯ ಸಮತೋಲನ ದೃಷ್ಟಿಕೋನ. ನಾನು ಸಂಪ್ರದಾಯವನ್ನು ಆತುಕೊಳ್ಳುವುದರ ಜೊತೆಗೆ ಆಧುನಿಕ ಜಗತ್ತಿಗೆ ಪ್ರಸ್ತುತವೆನಿಸುವ ಒಳಗೊಳ್ಳುವಿಕೆ ಮತ್ತು ನೈತಿಕ ವ್ಯಾಖ್ಯಾನಗಳಿಗಾಗಿ ಶ್ರಮಿಸುತ್ತಿದ್ದೇನೆ.

**◆ ನೀವು ಸಾಹಿತ್ಯದಲ್ಲಿ ಪದೇ ಪದೇ ಶೋಧಿಸುವ ವಸ್ತು ವಿಷಯಗಳೇನು? ಕವಿತೆಯಲ್ಲಿ ಏನನ್ನು ಹುಡುಕ್ತಿದೀರಿ ಅನ್ಸುತ್ತೆ?**

ಯಾವುದೇ ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ನನ್ನನ್ನು ನಾನು ಕಟ್ಟಿ ಹಾಕಿಕೊಂಡಿಲ್ಲ. ಉದ್ದೇಶಪೂರ್ವಕವಾಗಿ ಕಡೆಗಣಿಸಲ್ಪಟ್ಟವರು, ಮರೆತು ಹೋದವರು ಮತ್ತು ಅಂಚಿಗೆ ತಳ್ಳಲ್ಪಟ್ಟ ದನಿಯಿಲ್ಲದವರ ಪರವಾಗಿ ನಿಂತ ಸಾಹಿತ್ಯ ನನ್ನನ್ನು ಸೆಳೆಯುತ್ತದೆ. ನನ್ನ ಸಮುದಾಯ ಮತ್ತದು ಬೆಳೆದು ಬಂದ ಹಾದಿಯನ್ನು ದಾಖಲಿಸುವ ಟ್ಯುನೀಷಿಯನ್ ಸಾಹಿತ್ಯವನ್ನು ನಾನು ಗೌರವಿಸುತ್ತೇನೆ. ನನ್ನನ್ನು ಹೊಸ ಜಗತ್ತಿಗೆ ಕರೆದೊಯ್ಯುವ ಪುಸ್ತಕವೊಂದನ್ನು ತೆರೆದಾಗ, ನನಗರಿವಿಲ್ಲದ ಸಮುದಾಯಗಳ ನಡುವೆ ನಾನು ಜೀವಿಸುತ್ತೇನೆ ಮತ್ತು ಕೆಲವು ಸಲ ಅದರ ಪಾತ್ರ, ಮಾತು, ರೀತಿ- ನೀತಿ, ಹಾವ-ಭಾವಗಳನ್ನು ಮೈಗೂಡಿಸಿಕೊಳ್ಳುತ್ತೇನೆ. ಮಾನವನ ಅಂತಃಪ್ರಜ್ಞೆಯ ಆಳಕ್ಕಿಳಿಯುವ, ಮನುಷ್ಯತ್ವದ ಒಗ್ಗೂಡಿಸುವಿಕೆಯನ್ನು ಹುಡುಕುವ ಸಾಹಿತ್ಯದ ಕಡೆಗೆ ನಾನು ಸದಾ ವಾಲುತ್ತೇನೆ. ಅನುವಾದಿತ ಸಾಹಿತ್ಯವನ್ನು ಓದುವಾಗ, ಅನುವಾದಿತ ಪದ್ಯದ ತುಣುಕೊಂದರ ಮೂಲಕ ಲ್ಯಾಟಿನ್ ಅಮೆರಿಕ ಅಥವಾ ಇಂಡಿಯಾದ ನೆರೆಹೊರೆಯ ಭಾವ-ವಿಭಾವಗಳು ನನ್ನೊಳಗೆ ಪ್ರತಿಧ್ವನಿಸುವುದನ್ನು ನಾನು ಕಂಡುಕೊಂಡಿದ್ದೇನೆ. ನಮ್ಮೆಲ್ಲರ ಬೇರೆ ಬೇರೆ ಮೂಲ ಮತ್ತು ಸಂಸ್ಕೃತಿಯ ಹೊರತಾಗಿಯೂ ನಾವೆಲ್ಲರೂ ಒಂದೇ ದೈವಿಕ ಚೈತನ್ಯದಿಂದ ರೂಪುಗೊಂಡವರೆಂಬುದನ್ನು ಇದು ಮತ್ತೆ ಮತ್ತೆ ಮನಗಾಣಿಸುತ್ತದೆ.

ಇನ್ನು ಕಾವ್ಯದ ಬಗ್ಗೆ ಹೇಳುವುದಾದರೆ, ಇದೊಂದು ಮ್ಯಾಜಿಕ್. ಈ ಮ್ಯಾಜಿಕ್‌ನಿಂದ ನಿರ್ದಿಷ್ಟವಾಗಿ ನಾನೇನನ್ನೂ ಬಯಸುವುದಿಲ್ಲ. ಕೆಲವೊಂದು ಸಲ ಹಲವು ತಿಂಗಳುಗಳ ಕಾಲ ಕಾವ್ಯ ನನ್ನನ್ನಾಗಲಿ, ನಾನು ಕಾವ್ಯವನ್ನಾಗಲಿ ಮಾತನಾಡಿಸುವ ಗೊಡವೆಗೇ ಹೋಗುವುದಿಲ್ಲ. ಆದರೆ, ದೀರ್ಘಕಾಲ ಅಗಲಿರಲಾರದಂತೆ ನಾವು ಒಬ್ಬರನ್ನೊಬ್ಬರು ಮತ್ತೆ ಸೇರಿಕೊಳ್ಳುತ್ತೇವೆ, ಎಂದೂ ದೂರವೇ ಆಗಿಲ್ಲವೆಂಬಂತೆ. ಒಬ್ಬ ಕವಿ ಕವಿತೆಯನ್ನು ಹೆಣೆಯುವಂತೆ ಈ ಜಗತ್ತಿನಲ್ಲಿ ನನ್ನ ಅಸ್ತಿತ್ವದ ರಹಸ್ಯದ ಸಿಕ್ಕನ್ನು ಬಿಡಿಸಲು ನಾನು ಪ್ರಯತ್ನಿಸುತ್ತೇನೆ. ನನ್ನ ಪ್ರಕಾರ ಇದೊಂದು ತನಗಾಗಿ ಗೂಡು ಕಟ್ಟಿಕೊಳ್ಳುವ ಹಕ್ಕಿಯಂತೆ ಶುದ್ಧ ಜೈವಿಕ ಕ್ರಿಯೆ!

**◆ ನಿಮ್ಮ ಪ್ರಕಾರ ಇವತ್ತಿನ ಜಾಗತೀಕರಣೋತ್ತರ ಕಾಲದಲ್ಲಿ ಅರಬ್ ಜಗತ್ತಿನ ಮಹಿಳೆಯರ ಮುಂದಿರುವ ನೈಜ ಸವಾಲು ಹಾಗೂ ಸಾಧ್ಯತೆಗಳೇನು?**

ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿ ಅರಬ್ ಜಗತ್ತಿನ ಮಹಿಳೆಯರು ಗಮನಾರ್ಹ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಹಾಗೆಯೇ ಅವರಿಗೆ ಸಾಕಷ್ಟು ಅವಕಾಶಗಳು ಇವೆ. ವೃತ್ತಿಪರ ಜವಾಬ್ದಾರಿಗಳು, ಶಿಕ್ಷಣ, ಮಕ್ಕಳ ಪಾಲನೆ, ಸ್ವ-ಆರೈಕೆ ಮತ್ತು ಮನೆಯ ನಿರ್ವಹಣೆಯೂ ಸೇರಿದಂತೆ ನಮ್ಮಿಂದ ನಿರೀಕ್ಷಿಸುವ ಹಲವು ಪಾತ್ರಗಳನ್ನು ಬ್ಯಾಲೆನ್ಸ್ ಮಾಡುವುದು ಪ್ರಾಥಮಿಕ ಸವಾಲುಗಳಲ್ಲಿ ಒಂದಾಗಿದೆ. ಬದಲಾವಣೆಯ ಕ್ಷಿಪ್ರ ವೇಗ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಆಕ್ರಮಣಕಾರಿ ಒತ್ತಡಗಳು ಸಂಕೀರ್ಣತೆಯನ್ನು ಮತ್ತಷ್ಟು ಹೆಚ್ಚಿಸಿ ನಮ್ಮನ್ನ ಮತ್ತೆ ಮತ್ತೆ ಕರ್ತವ್ಯಗಳು ಮತ್ತು ವೈಯಕ್ತಿಕ ಆಕಾಂಕ್ಷೆಗಳ ನಡುವೆ ಛಿದ್ರವಾಗುವಂತೆ ಮಾಡುತ್ತವೆ.

●